Scholarships for Depressed Class students studying in Technical Institutions.

Q.—1364. Sri G. DUGGAPPA (Chitaldrug) :—

Will the Government be pleased to state :—

whether they have set apart any amount for scholarship for the depressed class students studying in the technical and occupational institutions in the state?

A.— Sri V. VENKATAPPA (Minister for Education).—

Yes.

ಶ್ರೀ ಜಿ. ದುಗ್ಗಪ್ಪ.—ಎಷ್ಟು ಹಣ ಒದಗಿಸಿದೆ ಎಂದು ಕೇಳಿರುವುದಕ್ಕೆ ಪೊಗುಮ್ಮಾಗಿ "ಹೌದು" ಎಂದು ಉತ್ತರ ಕೊಟ್ಟಿರುವುದು ಸರಿಯೆ ?

ಶ್ರೀ ವಿ. ವೆಂಕಟಪ್ಪ.—ಇಷ್ಟುಹಣವೆಂದು ಈ ಸಂದರ್ಭದಲ್ಲಿ ಹೇಳುವುದು ಕಷ್ಟ. ನಮ್ಮ ಮೈಸೂರು ಯೂನಿವರ್ಸಿಟಿಯವರು 30 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ; ಡಿಪ್ರೆಸ್ಡ್ ಕ್ಲಾಸ್ ಕಮೀಷನರು 18 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕರ್ಣಾಟಕ ಯೂನಿವರ್ಸಿಟಿಯವರು ಎಷ್ಟು ಕೊಟ್ಟಿದ್ದಾರೆಂದು ಹೇಳುವುದಕ್ಕೆ ಅಂಕಿ ಅಂಶ ಸಿಕ್ಕಿಲ್ಲ. ಒಟ್ಟಿನಲ್ಲಿ ಕಾಲೇಜು ಮತ್ತು ಇಕ್ಸ್ಟಿಟೂಟುಗಳಲ್ಲಿ ವ್ಯಾಸಂಗ ಮಾಡುತ್ತಿರುವ ನಿಮ್ಮ ವರ್ಗದ ವಿದ್ಯಾರ್ಥಿಗಳಿಗೆಲ್ಲಾ ವಿದ್ಯಾರ್ಥಿವೇತನ ಕೊಡಲಾಗಿದೆಯೆಂದು ತಿಳಿದು ಬಂದಿದೆ.

ಶ್ರೀ ಜಿ. ದುಗ್ಗಪ್ಪ.—ಆಕ್ಯುಪೇಷನರ್ ಇಕ್ಸ್ಟಿಟ್ಯೂಷನ್ಸ್ ವಿಚಾರ ನಾನು ಕೇಳಿರುವುದು. ಮೈಸೂರು ಸರ್ಕಾರ ಎಷ್ಟು ಹಣ ಕೊಟ್ಟಿದೆ ?

ಶ್ರೀ ವಿ. ವೆಂಕಟಪ್ಪ.—ಮೈಸೂರು ಯೂನಿವರ್ಸಿಟಿಯಿಂದ 30 ಸಾವಿರ ರೂಪಾಯಿಗಳು, ಡಿಪ್ರೆಸ್ಡ್ ಕ್ಲಾಸ್ ಕಮೀಷನರಿಂದ 18 ಸಾವಿರ ರೂಪಾಯಿಗಳು ಮತ್ತು ಇತರ ಸೋರ್ಸಸ್‌ನಿಂದ ಬಂದಿರುವುದು ಎಲ್ಲಾ ಸೇರಿ ಒಟ್ಟು 57,796 ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ. ಕರ್ಣಾಟಕ ಯೂನಿವರ್ಸಿಟಿಯ ವಿಚಾರ ಗೊತ್ತಿಲ್ಲ. ಎಲ್ಲಾ ನಿಮ್ಮ ವರ್ಗದ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿವೇತನ ಸಿಕ್ಕಿದೆಯೆಂದು ಮಾತ್ರ ಅವರು ತಿಳಿಸಿದ್ದಾರೆ.

ಶ್ರೀ ಬಿ. ರಾಚಯ್ಯ.—ಬೆಂಗಳೂರಿನ ಜಯಚಾಮರಾಜೇಂದ್ರ ಆಕ್ಯುಪೇಷನರ್ ಇಕ್ಸ್ಟಿಟ್ಯೂಟ್ ಮತ್ತು ಮೈಸೂರಿನ ಸಿ.ಪಿ.ಸಿ. ಆಕ್ಯುಪೇಷನಲ್ ಇಕ್ಸ್ಟಿಟ್ಯೂಟ್ ಇವೆರಡೂ ಡೈರೆಕ್ಟರ್ ಆಫ್ ಪಬ್ಲಿಕ್ ಇಕ್ಸ್‌ಸ್ಟ್ರಕ್ಷನ್ ಕಂಟ್ರೋಲ್‌ಗೆ ಸೇರಿವೆಯೆ ?

ಶ್ರೀ ವಿ. ವೆಂಕಟಪ್ಪ.—ಹೌದು.

ಶ್ರೀ ಬಿ ರಾಚಯ್ಯ.—ಕೆಲವು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸಿಕ್ಕಿಲ್ಲವೆಂದು ತಿಳಿದುಬಂದಿದೆ. ಅವರಿಗೆ ಕೊಡುವುದಕ್ಕೆ ಪ್ರಯತ್ನಮಾಡುತ್ತಿರಾ?

ಶ್ರೀ ವಿ. ವೆಂಕಟಪ್ಪ.—ಕರ್ಣಾಟಕ ಯೂನಿವರ್ಸಿಟಿಯವಿಚಾರ ಸರಿಯಾಗಿ ಗೊತ್ತಾಗಿಲ್ಲ. ಕೊಡದಿದ್ದರೆ ವಿಚಾರ ಮಾಡಬೇಕು.

Sri V. P. DEENADAYALU NAIDU.—The Government of Mysore has taken over industrial institutes of the Government of India. But in those institutions, the Scheduled Caste students are not awarded these scholarships. What is the reason ?

Sri V. VENKATAPPA.—That information is not available. I shall find out.

Sri V. P. DEENADAYALU NAIDU.—Do these not come under technical institutions ?

Sri V. VENKATAPPA.—No. They are separate.

ಶ್ರೀ ಎಸ್. ಪೈ. ಪಾಟೀಲ್—ಬೊಂಬಾಯಿ ಕರ್ಣಾಟಕಕ್ಕೆ ಎಷ್ಟು ಕೊಟ್ಟಿದೆ ?

ಶ್ರೀ ವಿ. ವೆಂಕಟಪ್ಪ.—ಆ ಸಮಾಚಾರಸಿಕ್ಕಿಲ್ಲ.

ಶ್ರೀ ಟಿ. ಹನುಮಯ್ಯ.—ಮಂಜೂರಾದ ವಿದ್ಯಾರ್ಥಿವೇತನಗಳನ್ನು ಕೊಡುವುದಕ್ಕೆ ಆರು ತಿಂಗಳು ಅಥವಾ ವರ್ಷ ಆಗಬೇಕೆ ?

ಶ್ರೀ ವಿ. ವೆಂಕಟಪ್ಪ.—ಕೆಲವು ವೇಳೆ ಸ್ವಲ್ಪ ನಿಧಾನವಾಯಿತು. ಹೊಸದಾಗಿ ಹಿಂದೆ ಹಣ ಕೊಟ್ಟೆವು. ಅದನ್ನು ಎಲ್ಲೆಲ್ಲಿ ಎಷ್ಟೆಷ್ಟು ಜನ ವಿದ್ಯಾರ್ಥಿಗಳಿದ್ದಾರೆಂಬುದನ್ನು ತಿಳಿದುಕೊಂಡು ಹಂಚುವುದಕ್ಕೆ ಸ್ವಲ್ಪ ನಿಧಾನವಾಯಿತು. ಸಾಧಾರಣವಾಗಿ ಸಕಾಲದಲ್ಲಿ ಕೊಡುತ್ತೇವೆ,

ಶ್ರೀ ಜಿ. ವೆಂಕಟೇಗೌಡ.—ಮೈಸೂರು ದೇಶದ ನಿಮ್ನವರ್ಗದ ವಿದ್ಯಾರ್ಥಿಗಳು ವಿದ್ಯಾನು ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ವಿದ್ಯಾಭ್ಯಾನ ಮಾಡುತ್ತಿದ್ದರೂ ಅವರಿಗೂ ವಿದ್ಯಾರ್ಥಿವೇತನ ಕೊಡುತ್ತಿದ್ದೀರಾ ?

Sri V. VENKATAPPA.—It does not arise from the original question. ಪ್ರಶ್ನೆಯಲ್ಲಿ ಹೊರಗಡೆ ವಿಚಾರ ಕೇಳಿಲ್ಲ, ಮೈಸೂರು ದೇಶದ ವಿಚಾರ ಮಾತ್ರ ಕೇಳಿದ್ದಾರೆ.

ಶ್ರೀ ಬಿ. ರಾಚಯ್ಯ.—ಬೆಂಗಳೂರು ವ್ಯತ್ತಿ ಶಿಕ್ಷಣ ಶಾಲೆಯಲ್ಲಿ ಕೊಟ್ಟಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ವಿ. ವೆಂಕಟಪ್ಪ.—ಕೊಟ್ಟಿದ್ದೇವೆಂದು ತಿಳಿಸಿದ್ದಾರೆ.

ಶ್ರೀ ಟಿ. ಹನುಮಯ್ಯ.—ಹಿಂದುಳಿದ ಪಂಗಡದವರಿಗೆ ವಿದ್ಯಾರ್ಥಿವೇತನ ಮಂಜೂರಾದ ತಕ್ಷಣ ಕೊಟ್ಟು ನಿಮ್ನವರ್ಗದವರಿಗೆ ನಿಧಾನಮಾಡಿರುವುದು ಹಣ ಜಾಸ್ತಿ ಕೊಟ್ಟದೆಯೆಂದಲ್ಲವೆ ?

ಶ್ರೀ ವಿ. ವೆಂಕಟಪ್ಪ.—ಆ ವಿಚಾರ ತಿಳಿಯದು. ಹಾಗಾಗಿದ್ದರೆ ವಿಷಯ ತಿಳಿಸಿದರೆ ವಿಚಾರ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಜಯಚಾಮರಾಜೇಂದ್ರ ಆಕ್ಯುಪೇಷನರ್ ಇಕ್ಸ್ಟಿಟ್ಯೂಟ್‌ನಲ್ಲಿ ಮಂಜೂರಾಗಿ ಎಂಟು ತಿಂಗಳಾದರೂ.....

ಶ್ರೀ ವಿ. ವೆಂಕಟಪ್ಪ.—ಇಲ್ಲ. ತಾವು ಹೇಳಿದ್ದೀರಿ, ವಿಚಾರ ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಆಶ್ರಯದಲ್ಲಿ ನಡೆಯುವ ಕೈಗಾರಿಕಾ ಪಾಠಶಾಲೆಯಲ್ಲಿ ತರಬೇತು ಹೊಂದುವ ನಿಮ್ನವರ್ಗದವರಿಗೆ

(ಶ್ರೀ ಜಿ. ದುಗ್ಗಪ್ಪ)

ಸಾಕಷ್ಟು ವಿದ್ಯಾರ್ಥಿವೇತನವಿಲ್ಲ, ಹಣದ ಕೊರತೆಯಿದೆಯೆಂಬ ಕಾರಣದಿಂದ ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರಾಗಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಅದು ಗಮನಕ್ಕೆ ಬಂದರೆ ಸೂಕ್ತಕ್ರಮ ಕೈಕೊಳ್ಳುತ್ತೀರಾ?

ಶ್ರೀ ವಿ. ವೆಂಕಟಪ್ಪ.—ಸರಿಯಾಗಿ ವಿಚಾರ ಹೇಳಿದರೆ ಆ ಇಲಾಖೆಗೆ ಬರೆಯುತ್ತೇವೆ.

---

2 P.M.

Rehabilitation at Balgund-Ouratbail in Khanapur Taluk.

Q.—1386. **Sri L. B. BIRJE** (Khanapur).—

Will the Government be pleased to state:—

(*a*) when was rehabilitation work started at Balgund-Ouratbail in Khanapur taluka of Belgaum district;

(*b*) the number of villages and the number of agriculturists benefited;

(*c*) the acreage brought under cultivation by the agriculturists in the beginning;

(*d*) the acreage under cultivation now;

(*e*) whether permanent residence at Balgund and non-transfer of lands to others were the conditions;

(*f*) the number of agriculturists who have violated these conditions?

A.—**Sri M. P. PATIL** (Minister for Revenue).—

(*a*) In the year 1950.

(*b*) Forty-one families from four villages took part in it as detailed below.

Village	*No. of families*
(1) Balgund	25
(2) Karajgi	9
(3) Tavargatti	6
(4) Godholi	1
Total	41

(*c*) 172 Acres, 35 Guntas.

(*d*) 223 Acres, 18 Guntas.

(*e*) Permanent residence at Balgund was not a condition, while non-transfer of lands to others was one of the conditions attached to the lease of the lands.

(*f*) No such cases have come to the notice of the Revenue Authorities.

Sri H. V. KOUJALGI.—How many of the 41 families have permanently settled in the new village called Balgund-Ouratbail?

Sri M. P. PATIL.—I am sorry, those figures are not with me.

Proposal to set up a Porcelain Factory in Hoskote.

Q.—1520. **Sri S. R. RAMIAH** (Hoskote).—

Will the Government be pleased to state:—

(*a*) whether they have received petitions requesting them to start an industry in Hoskote taluk:

(*b*) whether they are aware of the fact that white clay useful for porcelains is available at that place;

(*c*) if so, whether they propose to set up a Porcelain factory there?

A.—**Sri C. M. POONACHA** (Minister for Home Affairs and Industries).—

(*a*) Yes.

(*b*) and (*c*) The matter is being investigated.

ಶ್ರೀ ಎಸ್. ಆರ್. ರಾಮಯ್ಯ.—ಹೊಸಕೋಟೆ ತಾಲ್ಲೂಕಿನಲ್ಲಿ ಒಂದು ಕೈಗಾರಿಕೆಯನ್ನು ಸ್ಥಾಪಿಸುವ ವಿಷಯದಲ್ಲಿ ಎಷ್ಟು ದಿವಸಗಳಿಂದ ಅರಿಕೆಗಳು ಬರುತ್ತಿವೆ?

ಶ್ರೀ ಸಿ. ಎಂ. ಪೂಣಚ್ಚ.—ಈ ವಿಷಯದಲ್ಲಿ ಸರ್ಕಾರದವರಿಗೆ ಕೆಲವು ಮನವಿ ಪತ್ರಗಳು ಬಂದು ಅವನ್ನೆಲ್ಲ ಪರಿಶೀಲನೆಮಾಡಿ 1957ನೆಯ ಜುಲೈ ತಿಂಗಳ ವೇಳೆಗೆ ನಾವು ಅದನ್ನು ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಕಡೆಗೆ ಕಳುಹಿಸಿದೆವು. ಈ ಪ್ರಶ್ನೆಗೆ ಉತ್ತರಗಳನ್ನು ಕಳುಹಿಸುವ ಕಾಲಕ್ಕೆ ಅವರಿಂದ ಜವಾಬು ಬಂದಿರಲಿಲ್ಲ. ಅವರು ಎಲ್ಲ ವಿಷಯಗಳನ್ನೂ ಪರಿಶೀಲನೆಮಾಡಿ ಬೆಂಗಳೂರಿನಲ್ಲಿ ಒಂದು ಕಾರ್ಖಾನೆ ಸ್ಥಾಪನೆಯಾಗಿರುವುದರಿಂದ ಈ ಸಂದರ್ಭದಲ್ಲಿ ಹೊಸ ಕೋಚೆಯಲ್ಲಿ ಪ್ರತ್ಯೇಕವಾಗಿ ಬೇರೆ ಒಂದು ಕಾರ್ಖಾನೆಯನ್ನು ಸ್ಥಾಪನೆಮಾಡುವಂಥಾದ್ದು ಅಷ್ಟೊಂದು ಅವಶ್ಯ ಕಾಣುವುದಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಎಸ್. ಆರ್. ರಾಮಯ್ಯ.—ಈಗ ಅಲ್ಲಿಂದ ಮಣ್ಣನ್ನು ಬೆಂಗಳೂರು ಕಾರ್ಖಾನೆಗೆ ತರುತ್ತಿದ್ದಾರೆ. ಅಲ್ಲಯೇ ಒಂದು ಕಾರ್ಖಾನೆಯನ್ನು ಮಾಡುತ್ತೇವೆಂದು ಜನಗಳು ಮುಂದೆ ಬಂದರೆ ಆಲೋಚನೆ ಮಾಡುವುದಕ್ಕೆ ಸರ್ಕಾರದವರು ಸಿದ್ಧವಾಗಿದ್ದಾರೆಯೇ?